ನಂತರ ನಾನು ಸಂನ್ಯಾಸಿಯಾಗಿ ಬೇಲೂರು ಮಠಕ್ಕೆ ಹೋಗುವೆನೆಂದು ತೀರ್ಮಾನಿಸಿದೆ. ನನ್ನ ಇಚ್ಛೆಯನ್ನು ತಿಳಿದ ಶ್ರೀ 'ಮ' ಹೇಳಿದರು, ''ನೋಡು, ಸಾಧುವಾಗಬೇಕಾದರೆ ಮರಣದ ಬಗ್ಗೆ ಚಿಂತನೆ ಮಾಡಬೇಕು. 'ಕಠೋಪನಿಷತ್'ನಲ್ಲಿದೆ – ಮರಣಾನಂತರ ಏನಾಗುವುದು? ಎಂಬುದನ್ನು ತಿಳಿಯುವ ಉದ್ದೇಶದಿಂದ ನಚಿಕೇತನು ಮೃತ್ಯುವಿನ ಒಡೆಯನಾದ ಯಮನ ಬಳಿ ಹೋಗಿ ಮೃತ್ಯುವಿಲ್ಲದ ಅಮರ ಆತ್ಮವನ್ನು ತಿಳಿದುಕೊಂಡನು. ಈಗಿನಿಂದಲೇ ನೀನು ಸ್ಮಶಾನಕ್ಕೆ ಹೋಗಿ ಅಲ್ಲಿ ನೋಡಿದ್ದನ್ನೆಲ್ಲ ನನಗೆ ಹೇಳು.'' ನಾನು ಕೆಲವು ದಿನಗಳು ಸ್ಮಶಾನಕ್ಕೆ ಹೋಗಿದ್ದೆ. ಉರಿಯುತ್ತಿದ್ದ ಚಿತೆಗಳ ಸಂಖ್ಯೆ ಹಾಗೂ ಅಲ್ಲಿನ ವಾತಾವರಣದ ಬಗ್ಗೆ ಎಲ್ಲ ರಿಪೋರ್ಟ್ ಅವರಿಗೆ ನೀಡುತ್ತಿದ್ದೆ. ಅದೇನೆ ಇರಲಿ, ಒಂದು ದಿನ ಕಾರಣಾಂತರದಿಂದ ನಾನು ಸ್ಮಶಾನಕ್ಕೆ ಹೋಗಲಾಗಲಿಲ್ಲ. ಆಗ ಶ್ರೀ 'ಮ' ಹೇಳಿದರು, ''ಇದು ಸರಿಯಿಲ್ಲ. ನೀನು ಪ್ರತಿದಿನವೂ ಅಲ್ಲಿಗೆ ಹೋಗಬೇಕು.'' ನಾನೆಂದೆ, ''ಇಂದು ನಾನು ಒಬ್ಬ ಸ್ನೇಹಿತನ ಮನೆಗೆ ಹೋಗಿದ್ದೆ. ಅವನ ಪಕ್ಕದ ಮನೆಯಲ್ಲಿ ಒಬ್ಬರು ಮರಣ ಹೊಂದಿದ್ದರು. ಅವರು ಅಳುತ್ತಿರುವುದನ್ನು ಕೇಳಿದೆ.'' ಇದನ್ನು ಕೇಳಿದ ಶ್ರೀ ಮ ಹೇಳಿದರು, ''ಹೌದು. ಇದು ಕೂಡ ಒಳ್ಳೆಯ ಅನುಭವವೆ. ನೋಡು, ಮೃತ್ಯು–ಚಿಂತನೆ ಮಾಡದಿದ್ದರೆ ಮರಣದಿಂದಾಚೆ ಭಗವಂತನಿದ್ದಾನೆ ಎಂಬ ಅರಿವು ಆಗುವುದಿಲ್ಲ.'' ಹೀಗೆ ಅವರು ನನ್ನ ಮನದಲ್ಲಿ ವೈರಾಗ್ಯವನ್ನು ತುಂಬಿದರು.

೧೯೨೬ ರಲ್ಲಿ ನಾನು ಕಲ್ಕತ್ತ ಬಿಟ್ಟು ದೇವಘರದ ವಿದ್ಯಾಪೀಠವನ್ನು ಸೇರಿದೆ. ಅಲ್ಲಿ ನಾನು ನಾಲ್ಕು ವರ್ಷಗಳಿದ್ದೆ. ಅಲ್ಲಿ ನನಗೆ ಅನಾರೋಗ್ಯವುಂಟಾದ್ದರಿಂದ ೧೯೩೦ರಲ್ಲಿ ಬೇಲೂರು ಮಠದಲ್ಲಿ ಮಹಾಪುರುಷ ಮಹಾರಾಜರ ಬಳಿ ಬಂದೆ. ಅವರು ನನಗೆ ಕಾಶಿಗೆ ಹೋಗಲು ಹೇಳಿದರು. ಕಾಶಿಗೆ ಹೋಗುವ ಮುಂಚೆ ನಾನು ಆಗಾಗ ಶ್ರೀ 'ಮ' ಅವರನ್ನು ಕಾಣಲು ಹೋಗುತ್ತಿದ್ದೆ. ಈ ಸಮಯದಲ್ಲಿ ಪ್ರಯಾಗದ ಕುಂಭಮೇಳ ನಡೆಯುತ್ತಿತ್ತು. ಶ್ರೀ 'ಮ' ನನಗೆಂದರು, ''ಧೀರೇನ್, ನೀನು ಕುಂಭಮೇಳಕ್ಕೆ ಹೋಗು, ಚೆನ್ನಾಗಿರುತ್ತದೆ. ಸಾಧುಗಳದೆ ಪ್ರತ್ಯೇಕ ಸಮಾಜವನ್ನು ನೋಡಿದಾಗ ಸಂಸಾರದ ಮೇಲಿನ ವ್ಯಾಮೋಹ ಕಡಿಮೆಯಾಗುತ್ತದೆ. ಕುಂಭಮೇಳದಲ್ಲಿ ನಾನಾ ಸಂಪ್ರದಾಯದ ಸಾಧುಗಳು ಒಟ್ಟು ಸೇರುತ್ತಾರೆ. ಒಂದು ತಿಂಗಳಿಗಿಂತಲೂ ಹೆಚ್ಚು ಕಾಲ ನಡೆಯುವ ಈ ಸಮಾಗಮದಲ್ಲಿ ಸಾಧುಗಳ ಭಜನೆ, ಶಾಸ್ತ್ರಚರ್ಚೆ (ಉಪನ್ಯಾಸಗಳು), ಮೆರವಣಿಗೆ, ಭಂಡಾರ, ಮುಂತಾದವುಗಳನ್ನು ನೋಡಿ ಆನಂದಿಸುತ್ತ ಅವುಗಳಿಂದ ಅನೇಕ ಅನುಭವವನ್ನು ಪಡೆಯುವೆ. ಆನಂತರ ಇವುಗಳನ್ನು ನನಗೆ ಪತ್ರದಲ್ಲಿ ವರ್ಣಿಸಿ ಬರೆ.''

ಬೇಲೂರು ಮಠದಿಂದ ಕುಂಭಮೇಳಕ್ಕೆ ಹೋಗುವ ಸಾಧುಗಳಿಗಾಗಿ ಒಂದು ರೈಲು ಡಬ್ಬಿಯನ್ನು ಕಾಯ್ದಿಡಲಾಯಿತು. ಅವರೊಂದಿಗೆ ನಾನೂ ಸೇರಿ ಗಂಗಾ–ಯಮುನಾ ಸಂಗಮದ ಹತ್ತಿರವೆ ಒಂದು ಕ್ಯಾಂಪ್‌ನಲ್ಲಿದ್ದೆ. ಕುಂಭಮೇಳದ ವಿಸ್ತಾರ ವರ್ಣನೆಯನ್ನು ನೀಡುತ್ತ ನಾನು ಶ್ರೀ ಮ–ಅವರಿಗೆ ಪತ್ರವನ್ನು ಬರೆದಿದ್ದೆ. ಕುಂಭಮೇಳದಿಂದ ಕಾಶಿಗೆ ಹೋಗಿ ಅಲ್ಲಿಂದ ತಪಸ್ಸಿಗೆಂದು ಆಲ್ಮೋರಾಗೆ ಹೋದೆ. ಆಲ್ಮೋರಾದ ಕುಟೀರದ ನಿರ್ಜನವಾಸ ಹಾಗೂ ಅಲ್ಲಿನ ವಾತಾವರಣದ ಬಗ್ಗೆ ಶ್ರೀ 'ಮ' ಅವರಿಗೆ ಬರೆದಾಗ ಅವರು ಉತ್ತರಿಸಿದರು, ''ಇಂತಹ ನಿರ್ಜನ ಹಿಮಾಲಯದಲ್ಲಿ ಏಕಾಗ್ರಚಿತ್ತನಾಗಿ ನೀನು ಶ್ರೀ ಠಾಕೂರರ ಚಿಂತನೆಯಲ್ಲಿ ಕಾಲವನ್ನು ಕಳೆಯುತ್ತಿರುವೆ. ಎಂಥ ಸುಂದರ ವಾತಾವರಣ! ನನಗೂ ವೃದ್ಧಾಪ್ಯದಲ್ಲಿ ಈ ಕುಟೀರದಲ್ಲಿದ್ದುಕೊಂಡು ತಪಸ್ಸು ಮಾಡೋಣವೆಂದೆನಿಸುತ್ತದೆ. 'ತಪಸಾ ಚೀಯತೇ ಬ್ರಹ್ಮ.' ಆದರೆ ಒಂಟಿವಾಸ ಮಾಡುವಾಗ 'ಸಾಧು ಸಾವಧಾನ್!' (ಸಾಧು, ಜಾಗ್ರತೆಯಿಂದಿರು!) ಎಂಬ ಶ್ರೀ ಠಾಕೂರರ ಮಹಾವಾಕ್ಯವನ್ನು ಸದಾ ನೆನಪಿನಲ್ಲಿಟ್ಟುಕೊ.''

ಇದಾದ ಒಂದು ವರ್ಷದ ಬಳಿಕ ನಾನು ಕಲ್ಕತ್ತಕ್ಕೆ ಹಿಂದಿರುಗಿ ಶ್ರೀ 'ಮ' ಅವರನ್ನು ಭೇಟಿಯಾದೆ. ಅವರೆಂದರು, ''ಆಹಾ! ಕುಂಭಮೇಳವನ್ನು ನೀನು ಅದೆಷ್ಟು ಸೊಗಸಾಗಿ ವರ್ಣಿಸಿದ್ದೆ! ಎಲ್ಲಕ್ಕೂ ಮೊದಲು ನಿನ್ನ ಪತ್ರ ಸಿಕ್ಕಿತು. ಭಾರತದಂತಹ ಮನೋಹರ ದೇಶ ಪ್ರಪಂಚದಲ್ಲೇ ಬೇರೊಂದಿಲ್ಲ. ಸಾಧುಸಂತರು ತಪಸ್ಸು ಮಾಡುತ್ತ ಭಿಕ್ಷೆಯನ್ನವಲಂಬಿಸಿ ಜೀವನಧಾರಣೆ ಮಾಡುವ ದೇಶವಿದು. ಭಗವಂತನನ್ನು ಧ್ಯಾನಿಸುತ್ತ ತಮ್ಮ ಜೀವನವನ್ನು ಕಳೆಯಲೆಂದು ಜನರು ಸಾಧುಗಳಿಗೆ ಭಿಕ್ಷೆಯನ್ನು ನೀಡುವರು.''

ಹರಿ ಮಹಾರಾಜರು ಗೀತೆಯ ಉಪದೇಶಗಳನ್ನು ತಮ್ಮ ಜೀವನದಲ್ಲಿ ಅಭ್ಯಾಸ ಮಾಡುತ್ತ ಅವುಗಳ ಮರ್ಮವನ್ನು ಅನುಭವಕ್ಕೆ ತಂದುಕೊಳ್ಳುತ್ತಿದ್ದರು. ಭಗವದ್ಗೀತೆಯ ಮೂರ್ತಿಸ್ವರೂಪರಾಗಿದ್ದ ಅವರು ಶುಕದೇವನಂತೆ ಪರಿಶುದ್ಧರೂ ಪವಿತ್ರರೂ ಆಗಿದ್ದರು. ಮಹಾಪುರುಷ ಮಹಾರಾಜರು ನನಗೆ ಗೀತೆಯ ಈ ಶ್ಲೋಕವನ್ನು ಧ್ಯಾನ ಮಾಡಲು ಹೇಳಿದ್ದರು. – **''ಗತಿರ್ಭರ್ತಾ ಪ್ರಭುಃ ಸಾಕ್ಷೀ ನಿವಾಸಃ ಶರಣಂ ಸುಹೃತ್। ಪ್ರಭವಃ ಪ್ರಲಯ ಸ್ಥಾನಂ ನಿಧಾನಂ ಬೀಜಮವ್ಯಯಮ್ ॥** (೯.೧೮) – 'ಜೀವಿಗಳ ಪರಾಗತಿ ಹಾಗೂ ಪರಿಪಾಲಕನು ನಾನೇ ಆಗಿರುವೆ. ನಾನೇ ಒಡೆಯ ಹಾಗೂ ಸಕಲ ಜೀವಿಗಳ ವಾಸಸ್ಥಾನವೂ, ಅವುಗಳ ಕೃತ್ಯಾಕೃತ್ಯದ ಸಾಕ್ಷಿಯೂ ಆಗಿರುವೆ. ಸೃಷ್ಟಿ ಕರ್ತನೂ, ಸಂಹಾರ ಕರ್ತನೂ ನಾನೆ. ನಾನೆ ಜಗತ್ತಿನ ಆಧಾರವೂ, ಪ್ರಳಯ ಸ್ಥಾನವೂ ಹಾಗೂ ಅಕ್ಷಯ ಕಾರಣನೂ ಆಗಿರುವೆ.'

ಆಲ್ಮೋರಾದಲ್ಲಿದ್ದಾಗ ಭಗವದ್ಗೀತೆಯ ಒಂಬತ್ತು ಹಾಗೂ ಹತ್ತನೆಯ ಅಧ್ಯಾಯಗಳನ್ನು ಪ್ರತಿನಿತ್ಯವೂ ಪಠಿಸುತ್ತಿದ್ದೆ. ಈ ಎರಡು ಅಧ್ಯಾಯಗಳಲ್ಲಿ ಭಕ್ತಿಗೆ ಸಂಬಂಧಿಸಿದ ಅನೇಕ ವಿಷಯಗಳಿದ್ದರೂ ನನ್ನಲ್ಲಿ ಭಕ್ತಿಭಾವವು ಅಷ್ಟಾಗಿ ಉದಯಿಸಿರಲಿಲ್ಲ. ನಾನು ಠಾಕೂರರನ್ನು ಬಹಳವಾಗಿ ಪ್ರಾರ್ಥಿಸುತ್ತಿದ್ದೆ. ನಂತರ,

ಮಹಾಪುರುಷ ಮಹಾರಾಜ್ ಹಾಗೂ ಶ್ರೀ 'ಮ' ಜೀವಿತರಾಗಿದ್ದಾಗ ಅವರ ಸಂಗಲಾಭವನ್ನೇಕೆ ಪಡೆಯಬಾರದು? ಎಂದು ಕೊಂಡೆ. ಸಾಧುಜೀವನಕ್ಕೆ ಸತ್ಸಂಗವು ಅವಶ್ಯವಾಗಿ ಬೇಕಾದುದು.

ಏನೇ ಆಗಲಿ, ಠಾಕೂರರು ನನ್ನ ಪ್ರಾರ್ಥನೆಯನ್ನು ಈಡೇರಿಸಿದ್ದರು. ಕಾಶಿಗೆ ಹಿಂದಿರುಗಿ ಮೂರು-ನಾಲ್ಕು ತಿಂಗಳುಗಳು ಕಳೆದಾಗ ಅಕ್ಟೋಬರ್ ತಿಂಗಳಿನಲ್ಲಿ ಸ್ವಾಮಿ ವಿರಜಾನಂದರ ಪತ್ರವೊಂದು ಬಂತು. ಆಗ ಅವರು ಜನರಲ್ ಸೆಕ್ರೆಟರಿ. ಪತ್ರದಲ್ಲಿ ಅವರು '' 'ಉದ್ಬೋಧನ' ಪತ್ರಿಕೆಗೆ ಒಬ್ಬ ಉಪ ಸಂಪಾದಕರು ಬೇಕಾಗಿದ್ದಾರೆ. ನೀನು ತಡಮಾಡದೆ ಇಲ್ಲಿಗೆ ಬಾ'' ಎಂದು ಬರೆದಿದ್ದರು. ನನಗೆ ಬಹಳ ಆನಂದವಾಯಿತು. ನನಗೆ 'ಉದ್ಬೋಧನ'ದಲ್ಲಿರಲು ತುಂಬ ಆಸೆ, ಏಕೆಂದರೆ ಮಠದಲ್ಲಿ ನನಗೆ ಆಗಾಗ ಹುಷಾರು ತಪ್ಪುತ್ತಿತ್ತು. 'ಉದ್ಬೋಧನ'ದಲ್ಲಿದ್ದಾಗ ವಾರದ ಮೂರು – ನಾಲ್ಕು ದಿನಗಳು ಶ್ರೀ'ಮ' ಅವರ ಬಳಿ ಹೋಗುತ್ತಿದ್ದೆ.

ಶ್ರೀ 'ಮ' ಮರ್ಟನ್ ಸ್ಕೂಲಿನ ನಾಲ್ಕನೆ ಮಾಳಿಗೆಯ ಒಂದು ಕೋಣೆಯಲ್ಲಿದ್ದರು. ಆ ಕೋಣೆಯಲ್ಲಿ ಒಂದು ಮಂಚ, ಕೆಲವು ಪುಸ್ತಕಗಳಿದ್ದ ಬೀರು, ಗೋಡೆಯಲ್ಲಿ ಶ್ರೀಠಾಕೂರರು, ಶ್ರೀಮಾತೆ ಹಾಗೂ ಸ್ವಾಮೀಜಿಯವರ ಚಿತ್ರಗಳು ಹಾಗೂ ಠಾಕೂರರು ಉಪಯೋಗಿಸಿದ ಕೆಲವು ವಸ್ತುಗಳಿದ್ದವು.

ಒಂದು ದಿನ ಅವರನ್ನು ಕಾಣಲೆಂದು ಹೋದಾಗ ಅವರು ಮಂಚದ ಮೇಲೆ ಕುಳಿತಿದ್ದಾರೆ. ನಾನು ನೆಲದಲ್ಲಿ ಕುಳಿತೆ. ಅವರು ನನಗೆ 'ಅಸತೋ ಮಾ ಸದ್ಗಮಯ। ತಮಸೋಮಾ ಜ್ಯೋತಿರ್ಗಮಯ। ಮೃತ್ಯೋರ್ಮಾ ಅಮೃತಂ ಗಮಯ।'ವನ್ನು ಪಠಿಸಲು ಹೇಳಿದರು – ''ಅಸತ್ಯದಿಂದ ಸತ್ಯದೆಡೆಗೆ (ನನ್ನನ್ನು) ಮುನ್ನಡೆಸು, ಮೃತ್ಯುವಿನಿಂದ ಅಮೃತತ್ವದೆಡೆಗೆ(ನನ್ನನ್ನು) ಮುನ್ನಡೆಸು.'' ಈ ಪ್ರಾರ್ಥನೆಯ ವಿಶೇಷತೆಯನ್ನು ಶ್ರೀ 'ಮ' ಬಹಳ ಒತ್ತಿ ಹೇಳುತ್ತಿದ್ದರು. ಅವರೆನ್ನುತ್ತಿದ್ದರು, ''ಪ್ರಾರ್ಥನೆಯೆಂಬುದು ಕ್ಷಣಿಕ ಜೀವನ ಹಾಗೂ ಶಾಶ್ವತ ಜೀವನ ಇವುಗಳ ನಡುವಿನ ಸುವರ್ಣ ಸೇತುವೆ. ಈ ಕ್ಷಣಿಕ ಜೀವನವನ್ನು ಭಗವಂತನಿಗೆ ಅರ್ಪಿಸಬೇಕು. ಆಂತರಿಕ ಭಾವದಿಂದ ಪ್ರಾರ್ಥನೆ ಮಾಡು. ನೋಡು, ಆತನ ಕೃಪೆಯಿಲ್ಲದೆ ಯಾವುದೂ ಸಾಧ್ಯವಿಲ್ಲ.''

ಶ್ರೀ 'ಮ' ನನ್ನನ್ನು ಬಹಳ ಪ್ರೀತಿಸುತ್ತಿದ್ದರು. ಸದಾ ನನ್ನೊಡನೆ ಠಾಕೂರರ ಬಗ್ಗೆಯೇ ಮಾತನಾಡುತ್ತಿದ್ದರು. ಅವರ ಕೋಣೆಯೆದುರು ಸುತ್ತಲೂ ಗೋಡೆಗಳಿದ್ದ ಮೇಲ್ಛಾವಣಿಯಿತ್ತು; ಆಕಾಶವಲ್ಲದೆ ಬೇರೇನೂ ಕಾಣಿಸುತ್ತಿರಲಿಲ್ಲ. ಆ ಛಾವಣಿಯ ಮೇಲೆ ಅವರು ಟಬ್‌ಗಳಲ್ಲಿ ನಾನಾ ಬಗೆಯ ಹೂಗಿಡ ಹಾಗೂ ತುಳಸಿಗಿಡಗಳನ್ನು ಬೆಳೆಸಿ ಋಷಿಗಳಂತೆ ತಪೋವನವನ್ನು ಸೃಷ್ಟಿಸಿದ್ದರು. ಪ್ರತಿದಿನವೂ ಭಕ್ತರು ಬಂದಾಗ ಧ್ಯಾನ ಮಾಡಲು ಅಲ್ಲಿಗೆ ಕರೆದೊಯ್ಯುತ್ತಿದ್ದರು. ಒಂದು ದಿನ ನನ್ನ ಆಸನವನ್ನು ಅಲ್ಲಿಯೆ ಮರೆತು 'ಉದ್ಬೋಧನ'ಕ್ಕೆ ಬಂದಿದ್ದೆ. ಮಾರನೆ ದಿನ ಯಾರಿಗೂ ತಿಳಿಯದಂತೆ ಮಧ್ಯಾಹ್ನ ಎರಡು ಗಂಟೆಯ ವೇಳೆಗೆ ಆಸನವನ್ನು ತರಲು ಅಲ್ಲಿಗೆ ಹೋದಾಗ ನನ್ನನ್ನು ಕಂಡ ಶ್ರೀ ಮ ನನ್ನ ಕೈ ಹಿಡಿದು ತಮ್ಮ ಮಂಚದಲ್ಲಿ ಕುಳ್ಳಿರಿಸಿ, ''ನಿನ್ನ ಬಗೆಗೇ ಚಿಂತಿಸುತ್ತಿದ್ದೆ. ನಿನ್ನೊಡನೆ ನಾನು ಮಾತನಾಡಬೇಕು,'' ಎಂದರು. ನಾನೆಂದೆ, ''ನಾನು ಈಗಲೇ ಹೋಗಬೇಕು. 'ಶ್ರೀಮಾತೆಯವರ ಮನೆ'ಯಲ್ಲಿ ಮೂರು ಗಂಟೆಗೆ ಸ್ವಾಮಿ ವಾಸುದೇವಾನಂದರು ತೆಗೆದುಕೊಳ್ಳುವ 'ಛಾಂದೋಗ್ಯ ಉಪನಿಷತ್' ತರಗತಿಯಲ್ಲಿ ನಾನು ಉಪಸ್ಥಿತನಿರಬೇಕು.'' ಅವರೆಂದರು, ''ನೋಡು, ಅಧ್ಯಯನ ಮಾಡುತ್ತ ಭಗವಂತನೆಡೆಗೆ ಸಾಗುವ ರಾಜಮಾರ್ಗ ಯುಗ-ಯುಗಗಳಿಂದಲೂ ನಡೆದು ಬರುತ್ತಿದೆ. ಠಾಕೂರರಲ್ಲಿ ವಿಶ್ವಾಸವಿಡು. ಅವರಲ್ಲಿ ವಿಶ್ವಾಸವಿರಿಸಿ ಕ್ಲಾಸಿಗೆ ಹೋಗು. ಠಾಕೂರರು ಆವಿರ್ಭವಿಸಿ ಬಹು ಕಾಲವೇನೂ ಕಳೆದಿಲ್ಲ. ನಿನಗೆ ದೊರೆತಿರುವ ಸುವರ್ಣಾವಕಾಶವನ್ನು ಕಳೆದುಕೊಳ್ಳಬೇಡ. ಅವರು ಸಾಕ್ಷಾತ್ ಭಗವಂತನೇ ಹೌದು. ವೇದವೇದಾಂತಗಳ ಮೇಲೆ ಪ್ರಭುತ್ವವನ್ನು ಸ್ಥಾಪಿಸಿರುವರು. ಅವರನ್ನು ಅರ್ಥಮಾಡಿಕೊಂಡೆಯೆಂದರೆ ಇವೆಲ್ಲದರ ಜ್ಞಾನವನ್ನು ತಕ್ಷಣವೇ ಪಡೆಯಬಹುದು. ಬಹು ಬೇಗನೆ ಗುರಿ ಮುಟ್ಟಬಹುದು. ಇಲ್ಲವಾದರೆ ಬಹಳ ತಡವಾಗುವುದು – ತುಂಬಾ ತಡವಾಗುವುದು.''

ಆದರೆ ನನಗಾಗ ಶಾಸ್ತ್ರಗಳೆಂದರೆ ಎಲ್ಲಿಲ್ಲದ ಆಸಕ್ತಿ. ಶಾಸ್ತ್ರಗಳನ್ನೋದದೆ ಜ್ಞಾನವನ್ನು ಪಡೆಯಲಾಗದೆಂದು ಎಲ್ಲರೂ ಹೇಳುತ್ತಿದ್ದರು. ಶ್ರೀ ಮ-ಅವರಿಂದ ಕೈ ಬಿಡಿಸಿಕೊಂಡು ನಾನು 'ಉದ್ಬೋಧನ'ಕ್ಕೆ ಬಂದೆ. ಮೂರ್ಖನಂತೆ ನಾನು ಅವರಿಗೆ ಅಶ್ರದ್ಧೆಯನ್ನು ತೋರಿದ್ದೆ; ಅವರ ಮಾತುಗಳಿಗೆ ಬೆಲೆಗೊಡಲಿಲ್ಲ. ಅವರು ನನಗಾಗ ಗೂಢವಾದ ಯಾವುದೋ ಆಧ್ಯಾತ್ಮಿಕ ತತ್ತ್ವದ ಬಗ್ಗೆ ಹೇಳಲಿಚ್ಛಿಸಿದ್ದರೆಂದು ಈಗ ನನಗೆ ತೋರುತ್ತಿದೆ.

ನಂತರ ನಾನು ಶ್ರೀಮ-ಗೆ ಹೇಳಿದ್ದೆ, ''ನನ್ನ ಧ್ಯಾನ-ಧಾರಣೆಗಳು ಸರಿಯಾಗಿ ನಡೆಯುತ್ತಿಲ್ಲ. ನೀವು ನನಗೆ ಸಹಾಯ ಮಾಡಿ.'' ಎಂದು. ಆಗವರು ಹೇಳಿದ್ದರು, ''ನೋಡು, ಬರಿಯ ಶಾಸ್ತ್ರಗಳನ್ನು ಓದುವುದರಲ್ಲೇ ಮನಸ್ಸಿಟ್ಟರೆ ಆಳವಾದ ಧ್ಯಾನ-ಧಾರಣೆಯು ಸಾಧ್ಯವಾಗುವುದಿಲ್ಲ. ಭಗವಂತನ ಪ್ರಾರ್ಥನೆಯೆ ಅಸಲು. ಅದನ್ನು ಮಾಡಲು ನಿನಗೀಗ ಸಾಧ್ಯವಾಗದಿರುವಾಗ ಕೇವಲ ಭಗವಂತನ ಬಗ್ಗೆ ಮಾತನಾಡುವುದೇ ಒಂದು ಸಾಧನೆ. **''ಕಥಯಂತಶ್ಚ ಮಾಂ ನಿತ್ಯಂ ತುಷ್ಯಂತಿ ಚ ರಮಂತಿ ಚ''** *(ಗೀತಾ ೧೦.೯)* 'ನನ್ನ ಭಕ್ತರು ಸದಾ ನನ್ನ ತತ್ತ್ವ,ಗುಣ ಹಾಗೂ ಲೀಲಾ ಕಥೆಯನ್ನು ಚರ್ಚಿಸುತ್ತ ತುಷ್ಟರಾಗಿ ಆನಂದವನ್ನು ಪಡೆಯುವರು.' **'ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ'** *(ಗೀತಾ ೩.೧೧)* – ಹೀಗೆ ಪರಸ್ಪರ ಸಂತೋಷ ಸಾಧನೆಯಿಂದ ಮಂಗಳವಾಗುವುದು, ಎಂಬ ಈ ವಾಕ್ಯವನ್ನು ಅನುಸರಿಸು. ಭಕ್ತರೊಡನೆ ಭಗವಂತನ ಬಗ್ಗೆ ಮಾತನಾಡುತ್ತ ಹೋದರೆ ನಿನ್ನಲ್ಲಿ ಭಕ್ತಿಯ ಉದಯವಾಗುತ್ತದೆ. ಕೇವಲ ಆತನ ಬಗ್ಗೆ ಮಾತ್ರವೆ ಚಿಂತನೆ ಮಾಡು.''

***(ಮುಂದುವರಿಯುವುದು)***

# ರಘುಮಣಿ ದೇವಿ

ಡಾ. ಶೈಲಜಾ ಆಮೂರ

ಸ್ವಾಮಿ ವಿವೇಕಾನಂದರ ಸಂಪರ್ಕಕ್ಕೆ ಬಂದವರೆಲ್ಲ ಒಂದಲ್ಲ ಒಂದು ರೀತಿ ಅವರ ದಿವ್ಯ ವ್ಯಕ್ತಿತ್ವದ ಅಪಾರ ಪ್ರಭಾವಕ್ಕೆ ಒಳಗಾಗಿದ್ದರು. ಅನೇಕ ಮಂದಿ ಮಹಿಳೆಯರು ಹೇಗೆ ತಮ್ಮ ಬದುಕಿನಲ್ಲಿ ಸ್ವಾಮೀಜಿ ಪ್ರಭಾವವನ್ನು ಹೊಂದಿದ್ದರು ಎಂಬುದು ಒಂದು ರೋಚಕ ಸಂಗತಿಯಾಗಿದೆ. ಈ ದಿಕ್ಕಿನಲ್ಲಿ ಅಧ್ಯಯನ ಮಾಡಿರುವ ಲೇಖಕಿ ವೃತ್ತಿಯಲ್ಲಿ ವೈದ್ಯರು. ದಿವ್ಯತ್ರಯರ ಜೀವನ, ಸಂದೇಶಗಳಿಂದ ವಿಶೇಷವಾಗಿ ಪ್ರಭಾವಿತರಾಗಿರುವ ಅವರು ಬಿಡುವಿನ ವೇಳೆ ಆಧ್ಯಾತ್ಮಿಕ ಓದು, ಬರಹಗಳಲ್ಲಿ ತೊಡಗಿಕೊಂಡಿದ್ದಾರೆ.

ಸ್ವಾಮಿ ವಿವೇಕಾನಂದರನ್ನು ಅತಿ ಸನಿಹದಿಂದ ಕಾಣುವ ಸುಯೋಗ ಎಷ್ಟೋ ಭಾರತೀಯ ನಾರಿಯರಿಗೂ ಲಭಿಸಿತ್ತು. ಯಾರೋ ಕೆಲಕ್ಷಣ ಅವರೊಂದಿಗೆ ಕಳೆಯುವ ಸೌಭಾಗ್ಯ ಪಡೆದಿದ್ದರೆ ಮತ್ತಾರೋ ಹಲವು ದಿನಗಳವರೆಗೆ, ಹಲವು ವಾರಗಳವರೆಗೆ ಅವರೊಂದಿಗೆ ಕಳೆಯುವ ಸುಯೋಗವನ್ನು ಹೊಂದಿದವರಾಗಿದ್ದಾರೆ. ವಿವೇಕಾನಂದರ ಸನಿಹದಲ್ಲಿ ಕೆಲವೇ ಕೆಲಕ್ಷಣ ಬದುಕಿದ ಎಷ್ಟೋ ಭಾರತೀಯ ನಾರಿಯರೂ ಕೂಡ ಅವರ ವ್ಯಕ್ತಿತ್ವದಿಂದ ಪ್ರಭಾವಿತರಾಗಿ ತಮ್ಮ ಬದುಕನ್ನು ಅರ್ಥಪೂರ್ಣವಾಗಿಸಿಕೊಂಡರು.

ಸ್ವಾಮೀಜಿಯವರ ಬಾಲ್ಯದ ವೇಳೆಯಲ್ಲಿ ಅವರೊಡನೆ ಬಹಳಷ್ಟು ಸಮಯ ಕಳೆಯುವ ಸೌಭಾಗ್ಯ ಸಹಜವಾಗಿಯೇ ಅವರ ತಾಯಿ ಭುವನೇಶ್ವರೀ ದೇವಿಗೆ ಲಭಿಸಿತ್ತು. ಹಾಗೆಯೇ ಅವರ ತಾಯಿ ರಘುಮಣಿದೇವಿ ಅಂದರೆ ಸ್ವಾಮಿ ವಿವೇಕಾನಂದರ ಅಜ್ಜಿ ಕೂಡ ಹಲವು ವರ್ಷಗಳವರೆಗೆ ಬಾಲಕ ನರೇಂದ್ರನೊಡನೆ ಕಳೆದರು.

ಸ್ವಾಮಿ ವಿವೇಕಾನಂದರು ಇನ್ನೂ ಹುಡುಗನಾಗಿದ್ದಾಗ 'ನರೇಂದ್ರನಾಥ' ಅಥವಾ 'ಬಿಲೇ' ಎಂದು ಪರಿಚಿತರಾಗಿದ್ದರು. ನಮಗೆಲ್ಲ ತಿಳಿದಂತೆ ಸ್ವಾಮಿ ವಿವೇಕಾನಂದರ ಪೂರ್ವಾಶ್ರಮದ ಹೆಸರು ನರೇಂದ್ರನಾಥ.

ಬಾಲಕ ನರೇಂದ್ರನಿಗೆ ಅಜ್ಜಿ ರಘುಮಣಿದೇವಿ ಅಂದರೆ ಬಲು ಪ್ರೀತಿ. ತನ್ನ ಬಾಲ್ಯದ ಬಹಳಷ್ಟು ಸಮಯವನ್ನು ಅಜ್ಜಿಯ ಮನೆಯಲ್ಲಿಯೇ ಕಳೆಯುತ್ತಿದ್ದ. ಅದರಲ್ಲೂ ಅವನ ತಂದೆ ವಿಶ್ವನಾಥದತ್ತರ ಮರಣದ ನಂತರ ಅವನ ತಾಯಿ ಭುವನೇಶ್ವರೀ ದೇವಿಗೆ ಕೌಟುಂಬಿಕ ಕಲಹಗಳ ಕಾರಣದಿಂದ ತಮ್ಮ ಮನೆಯನ್ನೇ ಬಿಟ್ಟು ತನ್ನ ತಾಯಿ ರಘುಮಣಿಯ ಮನೆಗೆ ಬಂದು ಇರಬೇಕಾಗಿ ಬಂತು.



ಶ್ರೀಮಂತ ಮನೆತನದಲ್ಲಿ ಜನಿಸಿದ್ದ ರಘುಮಣಿಗೆ ಇದ್ದವಳು ಒಬ್ಬಳೇ ಒಬ್ಬಳು ಮಗಳು. ಅವಳೇ ನರೇಂದ್ರನಾಥನ ತಾಯಿ ಭುವನೇಶ್ವರೀ ದೇವಿ. ರಘುಮಣಿ ತನ್ನ ಮಗಳನ್ನು ಅತ್ಯಂತ ಪ್ರೀತಿಯಿಂದ ಬೆಳೆಸಿದ್ದಳಲ್ಲದೆ ಅವಳಿಗೆ ಯಾವುದೇ ಕಷ್ಟ ಒದಗಿ ಬಂದಾಗಲೂ ಅವಳನ್ನು ಕೂಡಲೇ ರಕ್ಷಿಸುತ್ತಿದ್ದಳು.

ಕಲ್ಕತ್ತೆಯ ಬೀಡನ್ ಓಣಿಯಲ್ಲಿ (Beadon Street) ಗೋಪಾಲಚಂದ್ರ ಘೋಷ್ ಮತ್ತು ರಾಯಿಮಣಿ ಎಂಬ ದಂಪತಿಗಳು ವಾಸಿಸುತ್ತಿದ್ದರು. ಅವರು ವೈಷ್ಣವ ಧರ್ಮದ ಭಕ್ತಿಮತಿಗಳಾಗಿದ್ದರು. ಈ ವೈಷ್ಣವ ದಂಪತಿಗಳ ಮಗಳೇ ನರೇಂದ್ರನಾಥನ ಅಜ್ಜಿ ರಘುಮಣಿದೇವಿ. ಕುಂಜಬಿಹಾರಿ ದತ್ತ ಹಾಗೂ ರತನಮಣಿದೇವಿ ದಂಪತಿಗಳು ರಘುಮಣಿದೇವಿಯ ಅಜ್ಜ ಹಾಗೂ ಅಜ್ಜಿಯರು. ಈ ದಂಪತಿಗಳಿಗೆ ರಾಯಿಮಣಿ ಹಾಗೂ ಗೋಕುಲಮಣಿ ಎಂಬ ಇಬ್ಬರು ಪುತ್ರಿಯರು, ಹಾಗೂ ನರಸಿಂಹ ಪ್ರಸಾದ ಎಂಬ ಒಬ್ಬ ಪುತ್ರನಿದ್ದನು. ಶ್ರೀರಾಮಕೃಷ್ಣರ ಗೃಹೀಭಕ್ತರಲ್ಲಿ ಅಗ್ರಗಣ್ಯನಾಗಿದ್ದ ರಾಮಚಂದ್ರ ದತ್ತನೇ ನರಸಿಂಹ ಪ್ರಸಾದನ ಮಗನಾಗಿದ್ದ. ವೈಷ್ಣವ ಸಂಪ್ರದಾಯದ ಎಷ್ಟೋ ಜನ